ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1993.

# *ಪ್ರತ್ಯಕ್ಷತೆಯ ಆಧಾರ – ದೃಢ ಪ್ರತಿಜ್ಞೆ*

(प्रत्यक्षता का आधार - दृढ़ प्रतिज्ञा)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಪರಮಾತ್ಮನ ಕೊರಳಿನ ಹಾರ ಆಗುವಂತಹ ವಿಜಯೀ ರತ್ನಗಳ ಪ್ರತಿ ಸದಾ ಸಮರ್ಥ ಬಾಪ್‌ದಾದಾ ಹೇಳಿದರು.**

ಇಂದು ಸಮರ್ಥ ತಂದೆ ತನ್ನ ಸಮರ್ಥ ಮಕ್ಕಳೊಂದಿಗೆ ಮಿಲನವನ್ನು ಆಚರಿಸುತ್ತಿದ್ದಾರೆ. ಸಮರ್ಥ ತಂದೆಯು ಪ್ರತಿಯೊಬ್ಬ ಮಗುವಿಗೂ ಸರ್ವ ಸಾಮರ್ಥ್ಯಗಳ ಖಜಾನೆಗಳನ್ನು ಅರ್ಥಾತ್ ಸರ್ವ ಶಕ್ತಿಗಳ ಖಜಾನೆ ಬ್ರಾಹ್ಮಣ ಜನ್ಮವಾದಾಗಲೇ ಜನ್ಮಸಿದ್ಧ ಅಧಿಕಾರದ ರೂಪದಲ್ಲಿ ಕೊಟ್ಟು ಬಿಟ್ಟಿದ್ದಾರೆ ಮತ್ತು ಪ್ರತಿಯೊಬ್ಬ ಬ್ರಾಹ್ಮಣ ಆತ್ಮ ತನ್ನ ಈ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಂಡು ಸ್ವಯಂ ಸಂಪನ್ನವಾಗಿ ಮತ್ತು ಅನ್ಯರನ್ನೂ ಸಹ ಸಂಪನ್ನರನ್ನಾಗಿ ಮಾಡುತ್ತಿದ್ದಾರೆ. ಈ ಸರ್ವ ಸಾಮರ್ಥ್ಯದ ಖಜಾನೆಗಳನ್ನು ಬಾಪ್‌ದಾದಾರವರು ಪ್ರತಿಯೊಂದು ಮಗುವಿಗೆ ಅತೀ ಸಹಜ ಹಾಗೂ ಸೆಕೆಂಡಿನಲ್ಲಿ ಕೊಟ್ಟಿದ್ದಾರೆ. ಹೇಗೆ ಕೊಟ್ಟರು? ಸೆಕೆಂಡಿನಲ್ಲಿ ಸ್ಮೃತಿ ತರಿಸಿದರು. ಸ್ಮೃತಿಯೇ ಸರ್ವ ಸಾಮರ್ಥ್ಯದ ಕೀಲಿಕೈ ಆಯಿತು. ಸ್ಮೃತಿ ಬಂತು - `ನನ್ನ ಬಾಬಾ' ಹಾಗೂ ಬಾಬಾರವರು ಹೇಳಿದರು - - 'ನನ್ನ ಮಗು'. ಇದೇ 'ಆತ್ಮಿಕ ಸ್ಮೃತಿ' ಸರ್ವ ಖಜಾನೆಗಳ ಕೀಲಿಕೈಯನ್ನು ಸೆಕೆಂಡಿನಲ್ಲಿ ಕೊಟ್ಟರು. ನನ್ನದು ಎಂದು ಕೊಂಡಿರಿ ಹಾಗೂ ಸರ್ವ ಜನ್ಮಸಿದ್ಧ ಅಧಿಕಾರವು ಪ್ರಾಪ್ತಿಯಾಯಿತು.

ಸಹಜವಾಗಿ ಸಿಕ್ಕಿ ಬಿಟ್ಟಿತಲ್ಲವೇ. ಈಗ ಪ್ರತಿ ಬ್ರಾಹ್ಮಣ ಆತ್ಮ ನಿಶ್ಚಯ ಹಾಗೂ ನಶೆಯಿಂದ ಹೇಳುತ್ತದೆ ಬಾಬಾರವರ ಖಜಾನೆಯೇ ನನ್ನ ಖಜಾನೆ, ಬಾಬಾರವರ ಖಜಾನೆಯನ್ನು ತಮ್ಮದಾಗಿಸಿಕೊಂಡು ಬಿಟ್ಟಿದ್ದೀರಿ.

ಇಂದಿನ ದಿನವನ್ನು ವಿಶೇಷವಾಗಿ ಸ್ಮೃತಿ ದಿವಸವೆಂದು ಹೇಳುತ್ತೀರಿ. ಈ ಸ್ಮೃತಿ ದಿವಸ ಮಕ್ಕಳಿಗೆ ಸರ್ವ ಸಾಮರ್ಥ್ಯವನ್ನು ಕೊಡುವ ದಿವಸವಾಗಿದೆ. ಹಾಗಂತೂ ಬ್ರಾಹ್ಮಣ ಜನ್ಮದ ಪ್ರತಿಯೊಂದು ದಿವಸ ಸಾಮರ್ಥ್ಯಗಳನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ ದಿನವಾಗಿದೆ ಆದರೆ ಇಂದಿನ ಸ್ಮೃತಿ ದಿವಸದ ವಿಶೇಷ ಮಹತ್ವವಿದೆ. ಆ ಮಹತ್ವವೇನಾಗಿದೆ? ಇಂದಿನ ದಿವಸದಂದು ವಿಶೇಷ ಬ್ರಹ್ಮಾತಂದೆಯು ತನ್ನನ್ನು ತಾನು ಅವ್ಯಕ್ತರನ್ನಾಗಿ ಮಾಡಿಕೊಂಡು ವ್ಯಕ್ತ ಸಾಕಾರ ರೂಪದಲ್ಲಿ ವಿಶೇಷ ಮಕ್ಕಳನ್ನು ವಿಶ್ವದ ಮುಂದೆ ಪ್ರತ್ಯಕ್ಷ ಮಾಡುವ ವಿಶೇಷ ವಿಲ್ ಪವರ್ ವಿಲ್ ಮಾಡಿದರು. ಹೇಗೆ ಆದಿಯಲ್ಲಿ ತಮ್ಮನ್ನು, ಸರ್ವ ಸಂಬಂಧ ಹಾಗೂ ಸಂಪತ್ತಿಯನ್ನು ಸೇವಾರ್ಥವಾಗಿ ಶಕ್ತಿಯರ ಮುಂದೆ ವಿಲ್ ಮಾಡಿದರರೋ ಹಾಗೆಯೇ ಇಂದಿನ ಸ್ಮೃತಿ ದಿವಸದಂದು ಬ್ರಹ್ಮಾತಂದೆಯು ಸಾಕಾರ ಪ್ರಪಂಚದಲ್ಲಿ ಸಾಕಾರ ರೂಪದ ಮೂಲಕ ವಿಶ್ವ ಸೇವೆಯ ನಿಮಿತ್ತ ಶಕ್ತಿ ಸೇನೆಯನ್ನು ತನ್ನ ಸಾಕಾರ ರೂಪದ ಪಾತ್ರವನ್ನು ಅಭಿನಯಿಸುವ ಸರ್ವ ವಿಲ್ ಪವರ್ ಮಕ್ಕಳಿಗೆ ಅರ್ಪಣೆ ಮಾಡಿದರು. ಸ್ವಯಂ ಅವ್ಯಕ್ತ ಗುಪ್ತ ರೂಪಧಾರಿಯಾದರು. ಹಾಗೂ ಮಕ್ಕಳನ್ನು ವ್ಯಕ್ತ ರೂಪದಲ್ಲಿ ವಿಶ್ವ ಕಲ್ಯಾಣದ ಪ್ರತಿ ನಿಮಿತ್ತ ಮಾಡಿದರು ಅರ್ಥಾತ್ ಸಾಕಾರ ರೂಪದಲ್ಲಿ ಸೇವೆಯ ವಿಲ್‌ಪವರ್ ಅರ್ಪಣೆ ಮಾಡಿದರು. ಆದ್ದರಿಂದ ಈ ದಿನವನ್ನು ಸ್ಮೃತಿ ದಿವಸ ಅಥವಾ ಸಮರ್ಥ ದಿವಸ ಎಂದು ಹೇಳಲಾಗುತ್ತದೆ.

ಬಾಪ್‌ದಾದಾರವರು ನೋಡುತ್ತಿದ್ದರು - ಅದೇ ಸ್ಥಿತಿಯ ಆಧಾರದ ಮೇಲೆ ದೇಶ ವಿದೇಶದಲ್ಲಿ ನಾಲ್ಕಾರು ಕಡೆ ಮಕ್ಕಳು ನಿಮಿತ್ತರಾಗಿ ಸೇವೆಯಲ್ಲಿ ಸದಾ ಮುಂದುವರೆಯುತ್ತಲೇ ಇರುತ್ತಾರೆ. ಇನ್ನೂ ಮುಂದುವರೆಯುತ್ತಲೇ ಇರುತ್ತಾರೆ ಏಕೆಂದರೆ ವಿಶೇಷ ತ್ರಿಮೂರ್ತಿ ವರದಾನ ಮಕ್ಕಳ ಜೊತೆಯಲ್ಲಿದೆ. ಶಿವಬಾಬಾರವರ ವರದಾನವಂತೂ ಇದ್ದೇ ಇದೆ. ಆದರೆ ಜೊತೆಯಲ್ಲಿ ಭಾಗ್ಯವಿದಾತ ಬ್ರಹ್ಮಾತಂದೆಯ ವರದಾನವೂ ಇದೆ. ಜೊತೆಯಲ್ಲಿ ಜಗದಂಬಾ ಸರಸ್ವತಿ ತಾಯಿಯ ಮಧುರ ವಾಣಿಯ ವರದಾನವೂ ಇದೆ. ಆದ್ದರಿಂದ ತ್ರಿಮೂರ್ತಿ ವರದಾನಗಳಿಂದ ಸಹಜ ಸಫಲತೆಯ ಅಧಿಕಾರ ಅನುಭವ ಮಾಡುತ್ತಿದ್ದೀರಿ. ಮುಂದೆ ಹೋಗುತ್ತಾ ಇನ್ನಷ್ಟು ಸಹಜ ಸಾಧನ ಹಾಗೂ ಶ್ರೇಷ್ಠ ಸಫಲತೆಯ ಅನುಭವ ಆಗಲೇಬೇಕು. ಬಾಪ್‌ದಾದಾರವರಿಗೆ ಪ್ರತ್ಯಕ್ಷ ಮಾಡುವ ಉತ್ಸಾಹ ಉಲ್ಲಾಸ ನಾಲ್ಕಾರು ಕಡೆ ಇದೆ - ಬೇಗ ಬೇಗ ಪ್ರತ್ಯಕ್ಷತೆ ಆಗಿ ಬಿಡಲಿ ಎಲ್ಲರೂ ಇದನ್ನೇ ಬಯಸುತ್ತಾರಲ್ಲವೆ! ಯಾವಾಗ ಆಗುವುದು? ನಾಳೆಯೇ ಆಗಿ ಬಿಡಲಿ ಏಕೆಂದರೆ ಇಲ್ಲೆ ಕುಳಿತಿದ್ದಂತೆ ಪ್ರತ್ಯಕ್ಷತೆಯ ನಗಾರಿ ಕೇಳಬಹುದು? ಆಗಿಯೇ ಬಿಟ್ಟಿದೆ. ಕೇವಲ ಏನು ಮಾಡಬೇಕು? ಮಾಡುತ್ತಾ ಇದ್ದೀರಿ ಹಾಗೂ ಮಾಡಲೂ ಬೇಕು. ಸಂಪೂರ್ಣ ಪ್ರತ್ಯಕ್ಷತೆಯ ನಗಾರಿ ಮೊಳಗುವುದಕ್ಕಾಗಿ ಕೇವಲ ಒಂದು ಮಾತನ್ನು ಅಂಡರ್‌ಲೈನ್ ಮಾಡಬೇಕು. ಪ್ರತ್ಯಕ್ಷತೆ ಹಾಗೂ ಪ್ರತೀಕ್ಷೆ - ಎರಡರ ಬ್ಯಾಲೆನ್ಸ್ ಸರ್ವಾತ್ಮರಿಗೆ ಬಾಪ್‌ದಾದಾರವರ ಮೂಲಕ ವರದಾನ ಪ್ರಾಪ್ತಿ ಮಾಡುವ ಆಧಾರವಾಗಿದೆ. ಪ್ರತೀಜ್ಞೆಯಂತೂ ಪ್ರತಿದಿನ ಮಾಡುತ್ತಿದ್ದೀರಿ. ಹಾಗಾದರೆ ಪ್ರತ್ಯಕ್ಷತೆಯಲ್ಲಿ ತಡ ಏಕಾಗುತ್ತಿದೆ? ಈಗೀಗ ಆಗಿ ಬಿಡಬೇಕು ಅಲ್ಲವೇ.

ಬಾಪ್‌ರಾದಾರವರು ನೋಡಿದರು - ಹೃದಯದಿಂದ, ಪ್ರೀತಿಯಿಂದ ಪ್ರತಿಜ್ಞೆಯನ್ನೂ ಮಾಡುತ್ತಿದ್ದೀರಿ. ಆದರೆ 1.ಪ್ರತಿಜ್ಞೆ. 2.ದೃಢ ಪ್ರತಿಜ್ಞೆ, ದೃಢ ಪ್ರತಿಜ್ಞೆಯ ಚಿಹ್ನೆ ಏನಾಗಿದೆ? ಪ್ರಾಣ ಹೋಗಲಿ ಆದರೆ ಪ್ರತಿಜ್ಞೆಯನ್ನು ಬಿಡಬಾರದು. ಯಾವಾಗ ಪ್ರಾಣವನ್ನು ಒತ್ತೆ ಇಡುವ ಮಾತು ಬಂದಿತು ಎಂದ ಮೇಲೆ ಚಿಕ್ಕ ಚಿಕ್ಕ ಸಮಸ್ಯೆ ಅಥವಾ ಸಮಯಾನುಸಾರ ಬರುವ ಎಷ್ಟೇ ದೊಡ್ಡ ವಿಕರಾಳ ರೂಪದ ಪರಿಸ್ಥಿತಿ ಬರಲಿ ಪ್ರಾಣದ ಮುಂದೆ ಇವುಗಳೇನು ದೊಡ್ಡವಲ್ಲ. ಇದನ್ನೆ ದೃಢ ಪ್ರತಿಜ್ಞೆ ಎಂದು ಹೇಳಲಾಗುತ್ತದೆ - ಯಾವುದೇ ಪರಿಸ್ಥಿತಿ ಬರಲಿ ಆದರೆ ಪರ ಸ್ಥಿತಿ 'ಸ್ವ ಸ್ಥಿತಿ'ಯನ್ನು ಅಲುಗಾಡಿಸದಿರಲಿ ಯಾವಾಗಲೂ ಯಾವುದೇ ಪರಿಸ್ಥಿತಿಯಲ್ಲೂ ಸೋಲುಣ್ಣಬಾರದು ಆದರೆ ಕೊರಳಿನ ಮಾಲೆಯಾಗಬೇಕು, ವಿಜಯರತ್ನಗಳಾಗಬೇಕು. ಪರಮಾತ್ಮ ಕೊರಳಿನ ಶೃಂಗಾರವಾಗಬೇಕು. ಇದಕ್ಕೇ ದೃಢ ಸಂಕಲ್ಪ ಅರ್ಥಾತ್ ದೃಢ ಪ್ರತಿಜ್ಞೆ ' ಎಂದು ಹೇಳಲಾಗುವುದು. ದೃಢತೆ ಶಬ್ದವನ್ನು ಅಂಡರ್ ಲೈನ್ ಮಾಡಿ. ಪ್ರತಿಜ್ಞೆ ಮಾಡುವುದು ಅರ್ಥಾತ್ ಪ್ರತ್ಯಕ್ಷದ ಸಾಕ್ಷಿಯನ್ನು ಕೊಡುವುದು ಆದರೆ ಕೆಲವೊಮ್ಮೆ ಕೆಲವು ಮಕ್ಕಳು ಪ್ರತಿಜ್ಞೆಯನ್ನೂ ಮಾಡುತ್ತಾರೆ. ಆದರೆ ಜೊತೆಯಲ್ಲಿ ಒಂದು ಆಟವನ್ನು ಬಹಳ ಚೆನ್ನಾಗಿ ಆಡುತ್ತಾರೆ. ಯಾವುದೇ ಸಮಸ್ಯೆ ಅಥವಾ ಪರಿಸ್ಥಿತಿಯು ಪ್ರತಿಜ್ಞೆಯನ್ನು ಬಲಹೀನ ಮಾಡುವ ಕಾರಣವಾದಾಗ ಆ ಕಾರಣವನ್ನು ನಿವಾರಣೆ ಮಾಡುವ ಬದಲಾಗಿ ನೆಪದ ಆಟವನ್ನು ಆಡುತ್ತಾರೆ. ಇದರಲ್ಲಿ ಬಹಳ ಬುದ್ಧಿವಂತರಾಗಿದ್ದಾರೆ.

ನೆಪದ ಆಟದ ಚಿಹ್ನೆ ಏನಾಗಿರುತ್ತದೆ? ಹೇಳುತ್ತಾರೆ ಹೀಗಿರಲಿಲ್ಲ ಹೀಗಿತ್ತು, ಹೀಗೆ ಆಗದಿದ್ದರೆ ಹಾಗೆ ಆಗುತ್ತಿರಲಿಲ್ಲ, ಇವರು ಹೀಗೆ ಮಾಡಿದರು. ಪರಿಸ್ಥಿತಿಯೇ ಹಾಗಿತ್ತು. ಮಾತೇ ಇಂತಹದ್ದಾಗಿತ್ತು. ಎಂದ ಮೇಲೆ 'ಹೀಗೆ ಮತ್ತು ಹಾಗೆ' ಈ ಭಾಷೆ ನೆಪದ ಆಟದ್ದಾಗಿದೆ. ದೃಢ ಪ್ರತಿಜ್ಞೆಯ ಭಾಷೆಯಾಗಿದೆ 'ಹೀಗಾಗಲಿ ಅಥವಾ ಹಾಗಾಗಲಿ' ಆದರೆ ನಾನು 'ತಂದೆಯಂತೆ' ಆಗಲೇಬೇಕು. ಬೇರೆಯವರನ್ನು ನಾನು ಮಾಡಬೇಕಾಗಿಲ್ಲ. ಆದರೆ ನಾನು ಆಗಬೇಕಾಗಿದೆ. ಬೇರೆಯವರು ಹಾಗೆ ಮಾಡಿದರೆ ನಾನಾದರೂ ಒಳ್ಳೆಯದಾಗಿರಬೇಕು. ಬೇರೆಯವರು ಸಹಯೋಗ ಕೊಟ್ಟರೆ ಆಗ ನಾನು ಸಂಪನ್ನ ಹಾಗೂ ಸಂಪೂರ್ಣ ಆಗುತ್ತೇನೆ - ಹೀಗಲ್ಲ. ಈ ರೀತಿ ತೆಗೆದುಕೊಳ್ಳುವ ಬದಲಾಗಿ ಮಾಸ್ಟರ್ ದಾತರಾಗಿ ಸಹಯೋಗ, ಸ್ನೇಹ, ಸಹಾನುಭೂತಿಯನ್ನು ಕೊಡುವುದೇ ತೆಗೆದುಕೊಳ್ಳುವುದಾಗಿದೆ. ನೆನಪಿಡಿ - ಬ್ರಾಹ್ಮಣ ಜೀವನದ ಅರ್ಥವೇ ಆಗಿದೆ - "ಕೊಡುವುದೇ ತೆಗೆದುಕೊಳ್ಳುವುದು. ಕೊಡುವುದರಲ್ಲಿಯೇ ತೆಗೆದುಕೊಳ್ಳುವುದಿದೆ." ಆದ್ದರಿಂದ ದೃಢ ಪ್ರತಿಜ್ಞೆಯ ಆಧಾರವಾಗಿದೆ - ಸ್ವಯಂನ್ನು ನೋಡಿಕೊಳ್ಳುವುದು. ಸ್ವಯಂನ್ನು ಬದಲಾವಣೆ ಮಾಡುವುದು, ಸ್ವಮಾನದಲ್ಲಿರುವುದು. ಸ್ವಮಾನವು ಮಾಸ್ಟರ್ ದಾತಾತನದ್ದಾಗಿದೆ. ಈ ಅವ್ಯಕ್ತ ವರ್ಷದಲ್ಲಿ ಏನು ಮಾಡುವಿರಿ? ಮಧುಬನದಲ್ಲಿ ಪ್ರತಿಜ್ಞೆ ಮಾಡಿ ಹೋಗುವಿರಿ ಹಾಗೂ ಅಲ್ಲಿ ಹೋಗಿ ನೆಪದ ಆಟವನ್ನು ಆಡುವಿರಿ.

ಪ್ರತಿಜ್ಞೆ ದೃಢವಾಗಿರುವ ಬದಲಾಗಿ ಬಲಹೀನವಿರುವ ಕಾರಣ ಪ್ರತಿಜ್ಞೆಯಲ್ಲಿ ಸಡಿಲವಾಗುವ ಒಂದೇ ಮೂಲ ಕಾರಣವಿದೆ. ಹೇಗೆ ಎಷ್ಟೇ ದೊಡ್ಡ ಮಷಿನರಿಯೂ ಒಂದು ಚಿಕ್ಕ ಸ್ಕ್ರೂ ಲೂಸ್ ಆಗಿಬಿಟ್ಟರೆ ಇಡೀ ಮಷಿನ್ ಕೆಲಸಕ್ಕೆ ಬರುವುದಿಲ್ಲವೋ ಹಾಗೆಯೇ ನೋಡಿದರೆ ಪ್ರತಿಜ್ಞೆಯನ್ನು ಪೂರ್ಣ ಮಾಡುವುದಕ್ಕಾಗಿ ಬಹಳ ಒಳ್ಳೊಳ್ಳೆಯ ಪ್ಲಾನ್ ಮಾಡುತ್ತೀರಿ. ಪುರುಷಾರ್ಥವು ಬಹಳ ಮಾಡುತ್ತೀರಿ. ಆದರೆ ಪುರುಷಾರ್ಥ ಹಾಗೂ ಪ್ಲಾನ್‌ಅನ್ನು ಬಲಹೀನ ಮಾಡುವ ಸ್ಕ್ರೂ ಒಂದೇ ಆಗಿದೆ - 'ನಿರ್ಲಕ್ಷ್ಯ'. ಅದು ಭಿನ್ನ ಭಿನ್ನ ರೂಪದಲ್ಲಿ ಬರುತ್ತದೆ ಹಾಗೂ ಹೊಸ ಹೊಸ ರೂಪದಲ್ಲಿ ಬರುತ್ತದೆ. ಹಳೆಯ

ರೂಪದಲ್ಲಿ ಬರುವುದಿಲ್ಲ. ಈ 'ನಿರ್ಲಕ್ಷ್ಯ ಭಾವನೆಯ ಲೂಜ್ ಸ್ಕ್ರೂವನ್ನು ಟೈಟ್ ಮಾಡಿ. ಇದಂತೂ ಆಗುತ್ತಲೇ ಇರುತ್ತದೆ - ಹೀಗಲ್ಲ, ಆಗಲೇಬೇಕು. ನಡೆಯುತ್ತಲೇ ಇರುತ್ತದೆ. ಆಗುತ್ತಲೇ ಇರುತ್ತದೆ - ಇದಾಗಿದೆ ನಿರ್ಲಕ್ಷ್ಯ. ಆಗಿ ಬಿಡುವುದು, ನೋಡುತ್ತೀರಿ - ವಿಶ್ವಾಸ ಮಾಡಿ, ದಾದಿ ದೀದಿಯವರು ನನ್ನ ಮೇಲೆ ವಿಶ್ವಾಸವನ್ನಿಡಿ ಆಗಿ ಬಿಡುವುದು, ಹೀಗಲ್ಲ. ಬಾಬಾರವರಂತೆ ಆಗಲೇಬೇಕು. ಈಗೀಗ ಆಗಬೇಕಾಗಿದೆ. ಮೂರನೆಯ ಮಾತಾಗಿದೆ - ಪ್ರತಿಜ್ಞೆಯನ್ನು ದೃಢತೆಯಿಂದ ಬಲಹೀನ ಮಾಡುವ ಆಧಾರ ಮೊದಲು ಸಹ ತಮಾಷೆಯ ಮಾತು ಹೇಳಿದ್ದೆವು - ಕೆಲವು ಮಕ್ಕಳ ಸಮೀಪದ ದೃಷ್ಟಿ ಬಲಹೀನವಾಗಿದೆ ಹಾಗೂ ದೂರದ ದೃಷ್ಟಿ ಬಹಳ ತೀಕ್ಷ್ಣವಾಗಿರುತ್ತದೆ. ಸಮೀಪದ ದೃಷ್ಟಿಯಾಗಿದೆ ಸ್ವಯಂನ್ನು ನೋಡಿಕೊಳ್ಳುವುದು, ಸ್ವಯಂನ್ನು ಬದಲಾಯಿಸುವುದು ಹಾಗೂ ದೂರದ ದೃಷ್ಟಿಯಾಗಿದೆ - ಅನ್ಯರನ್ನು ನೋಡುವುದು, ಅದರಲ್ಲೂ ಬಲಹೀನತೆಗಳನ್ನು ನೋಡುವುದು, ವಿಶೇಷತೆಯನ್ನು ನೋಡದಿರುವುದು. ಆದ್ದರಿಂದ ಉತ್ಸಾಹ ಉಲ್ಲಾಸದಲ್ಲಿ ಅಂತರ ಬಂದು ಬಿಡುತ್ತವೆ. ಹಿರಿಯರು ಸಹ ಹೀಗೆಯೇ ಮಾಡುತ್ತಾರೆ, ನಾವಂತು ಚಿಕ್ಕವರಾಗಿದ್ದೇವೆ ಎಂದ ಮೇಲೆ ದೂರದ ಬಲಹೀನತೆಯನ್ನು ನೋಡುವುದರ ದೃಷಿ ಮೋಸ ಮಾಡಿ ಬಿಡುತ್ತದೆ ಈ ಕಾರಣ ಪ್ರತಿಜ್ಞೆಯನ್ನು ಪ್ರ್ಯಾಕ್ಟಿಕಲ್ ನಲ್ಲಿ ತರುವುದು ಸಾಧ್ಯವಾಗುವುದಿಲ್ಲ. ಎಂದು ತಿಳಿಯುತ್ತಿರುತ್ತಾರೆ. ಕಾರಣವೇನೆಂದು ತಿಳಿಯಿತೇ? ಎಂದ ಮೇಲೆ ಈಗ ಈ ಸ್ಕ್ರೂ ಟೈಟ್ ಮಾಡುವುದು ಬರುತ್ತದೆಯೋ ಇಲ್ಲವೋ? ತಿಳುವಳಿಕೆಯ ಸ್ಕ್ರೂ ಡ್ರೈವರ್ ಅಂತೂ ಇದೆಯಲ್ಲವೇ, ಯಂತ್ರವಂತೂ ಇದೆಯಲ್ಲವೇ. ಈ ವರ್ಷ ತಿಳಿದುಕೊಳ್ಳುವುದು. ಬಯಸುವುದು ಹಾಗೂ ಮಾಡುವುದು 3 ಸಮಾನವನ್ನಾಗಿ ಮಾಡಿ ಮೂರನ್ನು ಸಮಾನ ಮಾಡುವುದ ಅರ್ಥಾತ್ ತಂದೆಯ ಸಮಾನ ಮಾಡುವುದು. ಒಂದು ವೇಳೆ ಬಾಪ್‌ದಾದಾ ಬರೆದುಕೊಡಿ ಎಂದು ಹೇಳಿದರೆ ಒಂದು ಸೆಕೆಂಡಿನಲ್ಲಿ ಬರೆಯುತ್ತಾರೆ! ಹಾಳೆಯಲ್ಲಿ ಬರೆಯುವುದು ಯಾವುದೇ ದೊಡ್ಡ ಮಾತಲ್ಲ. ಮಸ್ತಕದ ಮೇಲೆ ದೃಢ ಸಂಕಲ್ಪದ ಶಾಹಿಯಿಂದ ಬರೆದು ಬಿಡಿ ಬರೆಯಲು ಬರುತ್ತದೆಯಲ್ಲವೇ, ಮಸ್ತಕದ ಮೇಲೆ ಬರೆಯಲು ಬರುತ್ತದೆಯೋ ಅಥವಾ ಕೇವಲ ಹಾಳೆಯ ಮೇಲೆ ಬರೆಯುವುದು ಬರುತ್ತದೆಯೋ? ಎಲ್ಲರೂ ಬರೆದಿದ್ದೀರೋ? ಪಕ್ಕಾ? ಯಾರೂ 12 ದಿನದಲ್ಲಿ ಅಳಿಸಿ ಹೋಗುವಂತಹ ಕಚ್ಚಾ ಅಂತೂ ಇಲ್ಲವಲ್ಲ? ಮಾಡಲೇಬೇಕು, ಪ್ರಾಣ ಬೇಕಾದರೂ ಹೋಗಲಿ. ಆದರೆ ಪ್ರತಿಜ್ಞೆ ಹೋಗದಿರಲಿ ಈ ರೀತಿ ದೃಢ ಸಂಕಲ್ಪವೇ 'ತಂದೆಯ ಸಮಾನ' ಸಹಜವಾಗಿ ಮಾಡಿಸಿ ಬಿಡುತ್ತದೆ. ಇಲ್ಲವಾದರೆ ಕೆಲವೊಮ್ಮೆ ಪರಿಶ್ರಮ. ಕೆಲವೊಮ್ಮೆ ಪ್ರೀತಿ ಇದೇ ಆಟದಲ್ಲಿ ನಡೆಯುತ್ತಿರುತ್ತೀರಿ. ಇಂದಿನ ದಿನ ದೇಶ ವಿದೇಶದ ಎಲ್ಲಾ ಮಕ್ಕಳು ತನುವಿನಿಂದ ಅಲ್ಲಿದ್ದಾರೆ ಆದರೆ ಮನಸ್ಸಿನಿಂದ ಮಧುಬನದಲ್ಲಿದ್ದಾರೆ. ಆದ್ದರಿಂದ ಎಲ್ಲಾ ಮಕ್ಕಳಿಗೆ ಸ್ಮೃತಿ ದಿವಸದ ಅಲೌಕಿಕ ಅನುಭವದಲ್ಲಿ ಬಾಪ್‌ದಾದಾರವರು ನೋಡಿದರು - ಒಳ್ಳೊಳ್ಳೆಯ ಅನುಭವವನ್ನು ಮಾಡುತ್ತಿದ್ದಾರೆ. ಸೇವೆಯನ್ನು ಮಾಡುತ್ತಿದ್ದಾರೆ. ಅಲೌಕಿಕ ಅನುಭವಕ್ಕೆ ಹಾಗೂ ಸೇವೆಗೆ ಪ್ರತಿಯೊಂದು ಮಗುವಿಗೂ ಶುಭಾಷಯಗಳನ್ನು ಕೊಡುತ್ತಿದ್ದಾರೆ! ಎಲ್ಲರ ಶುದ್ಧ ಸಂಕಲ್ಪ, ಮಧುರ ಮಧುರ ಅತ್ಮಿಕ ವಾರ್ತಾಲಾಪ ಹಾಗೂ ಪ್ರೇಮದ ಮುತ್ತುಗಳ ಮಾಲೆಗಳು ಬಾಪ್‌ದಾದಾರವರ ಹತ್ತಿರ ತಲುಪಿವೆ. ರಿಟರ್ನ್‌ನಲ್ಲಿ ಬಾಪ್‌ದಾದಾರವರು ಸಹ ಸ್ನೇಹದ ಮಾಲೆಯನ್ನು ಎಲ್ಲಾ ಮಕ್ಕಳ ಕೊರಳಿಗೆ ಹಾಕುತ್ತಿದ್ದಾರೆ. ಪ್ರತಿಯೊಂದು ಮಗು ತಮ್ಮ ತಮ್ಮ ಹೆಸರಿನಿಂದ ವಿಶೇಷ ನೆನಪು ಪ್ರೀತಿ ಸ್ವೀಕಾರ ಮಾಡಿ. ಬಾಪ್‌ದಾದಾರವರ ಹತ್ತಿರ ಆತ್ಮೀಕ ವಯರ್‌ಲೆಸ್ ಸೆಟ್ ಒಂದೇ ಸಮಯದಲ್ಲಿ ಅನೇಕ ಮಕ್ಕಳ ಹೃದಯದ ಶಬ್ದ ತಲುಪಿ

ಬಿಡುವಷ್ಟು ಶಕ್ತಿಶಾಲಿಯಾಗಿದೆ. ಕೇವಲ ಶಬ್ದವಷ್ಟೇ ಅಲ್ಲ ಆದರೆ ಎಲ್ಲರ ಸ್ನೇಹಿ ಮೂರ್ತಿಯು ಇಮರ್ಜ್ ಆಗಿ ಬಿಡುವುದು. ಆದ್ದರಿಂದ ಎಲ್ಲರನ್ನು ಸನ್ಮುಖ ನೋಡಿ ವಿಶೇಷ ನೆನಪು ಪ್ರೀತಿಯನ್ನು ಕೊಡುತ್ತಿದ್ದಾರೆ. ಒಳ್ಳೆಯದು.

**ಸರ್ವ ಸಮರ್ಥ ಆತ್ಮರಿಗೆ, ಸರ್ವ ದೃಢ ಪ್ರತಿಜ್ಞೆ ಹಾಗೂ ಪ್ರತ್ಯಕ್ಷತೆಯ ಬ್ಯಾಲೆನ್ಸ್ ಇರುವಂತಹ ಶ್ರೇಷ್ಠ ಅತ್ಮರಿಗೆ, ಸದಾ ತಿಳುವಳಿಕೆ, ಬಯಸುವುದು, ಹಾಗೂ ಮಾಡುವುದು - ಮೂರನ್ನು ಸಮಾನ ಮಾಡುವಂತಹ ತಂದೆಯ ಸಮಾನ ಮಕ್ಕಳಿಗೆ, ಸದಾ ಸಮಸ್ಯೆಗಳಿಗೆ ಸೋಲುಣಿಸುವಂತಹ ಪರಮಾತ್ಮ ಕೊರಳಿನ ಹಾರ ಆಗುವಂತಹ ವಿಜಯೀ ರತ್ನಗಳಿಗೆ ಇಷ್ಟು ಬಾಪ್‌ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.**

**ದಾದಿಯವರೊಂದಿಗೆ ಭೇಟಿ.**

ಎಲ್ಲರೂ ಎರಡು ವಿಲ್ ನ ಪಾತ್ರರಾಗಿದ್ದೀರಿ - ಆದಿಯ ವಿಲ್ ಹಾಗೂ ಸಾಕಾರಸ್ವರೂಪದ ಅಂತ್ಯದ ವಿಲ್. ವಿಲ್ ಪವರ್ ಬಂದು ಬಿಟ್ಟಿತಲ್ಲವೇ! ಪಿಲ್ ಪವರ್‌ನ ವಿಲ್, ವಿಲ್ ಪವರ್‌ನ ಮೂಲಕ ಸದಾ ಸ್ವಯಂನ ಪುರುಷಾರ್ಥದಿಂದ ಎಕ್ಸ್‌ಟ್ರಾ ಕಾರ್ಯ ಮಾಡಿಸುತ್ತದೆ. ಈ ಸಾಹಸದ ಪ್ರತ್ಯಕ್ಷ ಫಲವಾಗಿ ಪದಮದಷ್ಟು ಸಹಯೋಗದ ಪಾತ್ರರಾಗಿ. ಕೆಲವರು ಯೋಚಿಸುತ್ತಾರೆ - ಈ ಆತ್ಮರೇ ನಿಮಿತ್ತ ಏಕಾದರು? ಇದರ ರಹಸ್ಯವಾಗಿದೆ - ವಿಶೇಷ ಸಮಯದಲ್ಲಿ ವಿಶೇಷ ಸಾಹಸ ಇಡುವುದರ ಪ್ರತ್ಯಕ್ಷ ಫಲ ಸದಾ ಕಾಲದ ಫಲವಾಗಿ ಬಿಟ್ಟಿತು. ಆದ್ದರಿಂದ ಗಾಯನವಿದೆ ಒಂದು ತಟ್ಟೆ ಸಾಹಸ ಹಾಗೂ ಪದಮದಷ್ಟು ಹೆಚ್ಚು ತಂದೆಯ ಸಹಯೋಗ, ಆದ್ದರಿಂದ ಸದಾ ಎಲ್ಲಾ ಮಾತುಗಳಿಂದ ಪಾರು ಮಾಡುವ ವಿಲ್ ಪವರ್ ವಿಲ್‌ನ ರೂಪದಲ್ಲಿ ಪ್ರಾಪ್ತವಾಗಿದೆ. ಹೀಗಲ್ಲ ನೀವು ಎಲ್ಲರೂ ಜೊತೆಗಾರರಾಗಿದ್ದೀರಿ. ಒಳ್ಳೆಯದು ಜೊತೆಯನ್ನಂತೂ ನಿಭಾಯಿಸುತ್ತಿದ್ದೀರಿ. ನಿಭಾಯಿಸುವಂತಹವರಿಗೆ ತಂದೆಯು ತಮ್ಮ ಪ್ರತಿ ಸಮಯ ಸಹಯೋಗದ ಪ್ರತಿಜ್ಞೆಯನ್ನು ನಿಭಾಯಿಸುತ್ತಾರೆ. ಹಾಗಾದರೆ ಈ ಎಲ್ಲಾ ಗ್ರೂಪ್ ನಿಭಾಯಿಸುವಂತಹವರದ್ದಾಗಿದೆ. (ಎಲ್ಲರನ್ನು ಕೇಳುತ್ತಾ) ನೀವೆಲ್ಲರೂ ಸಹ ನಿಭಾಯಿಸುವವರಾಗಿದ್ದೀರಲ್ಲವೇ ಅಥವಾ ಕೇವಲ ಪ್ರೀತಿಯನ್ನು ಮಾಡುವಂತಹವರಾಗಿದ್ದೀರಾ? ಮಾಡುವಂತಹವರು ಅನೇಕರಿರುತ್ತಾರೆ ಆದರೆ ನಿಭಾಯಿಸುವಂತಹವರು ಕೆಲವರೇ ಇರುತ್ತಾರೆ. ನೀವೆಲ್ಲರೂ ಯಾರಾಗಿದ್ದೀರಿ? ಕೋಟಿಯಲ್ಲಿ ಕೆಲವರು. ಕೆಲವರಲ್ಲಿಯೂ ಕೆಲವರಾಗಿದ್ದೀರಿ! ನೋಡಿ, ಪ್ರಪಂಚದಲ್ಲಿ ಹಂಗಾಮ ಆಗುತ್ತಿದೆ ಆದರೆ ನೀವು ಏನು ಮಾಡುತ್ತಿರುವಿರಿ? ಮೋಜನ್ನು ಆಚರಿಸುತ್ತಿದ್ದೀರಿ ಅಥವಾ ಗೊಂದಲದಲ್ಲಿದ್ದೀರೋ - ಏನು ಮಾಡಬೇಕು, ಏನು ಆಗಬೇಕು? ನೀವು ಹೇಳುತ್ತೀರಿ ಎಲ್ಲವೂ ಒಳ್ಳೆಯದೇ ಆಗಬೇಕಾಗಿದೆ. ಎಷ್ಟು ಅಂತರವಾಯಿತಲ್ಲವೇ! ಪ್ರಪಂಚದಲ್ಲಿ ಪ್ರತೀ ಸಮಯ ಪ್ರಶ್ನಾರ್ಥಕ ಚಿಹ್ನೆ ಇದೆ - ಏನಾಗುವುದು? ಹಾಗೂ ನಿಮ್ಮ ಹತ್ತಿರ ಏನಿದೆ? ಫುಲ್ ಸ್ಟಾಪ್. ಏನಾಯಿತು ಅದು ಒಳ್ಳೆಯದು ಹಾಗೂ ಏನು ಆಗಬೇಕಾಗಿದೆಯೋ ಅದು ನಮಗಾಗಿ ಒಳ್ಳೆಯದೇ. ಪ್ರಪಂಚದವರಿಗಾಗಿ ಅಕಾಲ ಮೃತ್ಯು ಇದೆ ಹಾಗೂ ನಿಮಗಾಗಿ ಮೋಜಿದೆ. ಭಯವಾಗುತ್ತದೆಯೇ? ಸ್ವಲ್ಪ ಸ್ವಲ್ಪ ರಕ್ತವನ್ನು ನೋಡಿದರೆ ಭಯವಾಗುವುದೇ? ನಿಮ್ಮ ಮುಂದೆ 7-8 ಜನರಿಗೆ ಗೋಲಿ(ಬುಲೆಟ್) ಹೊಡೆಯುತ್ತಾರೆಂದರೆ ಭಯ ಪಡುವಿರಾ' ನಿದ್ರೆಯಲ್ಲಿ ಕಾಣಿಸುವುದಿಲ್ಲವಲ್ಲವೇ! ಶಕ್ತಿ ಸೇನೆ

ಅರ್ಥಾತ್ ನಿರ್ಭಯ. ಮಾಯೆಯಿಂದಲೂ ಭಯವಿಲ್ಲ. ಪ್ರಕೃತಿಯ ಏರುಪೇರಿನಿಂದಲೂ ಭಯವಿಲ್ಲ. ಈ ರೀತಿ ನಿರ್ಭಯರಾಗಿದ್ದೀರಾ ಅಥವಾ ಸ್ವಲ್ಪ ಸ್ವಲ್ಪ ಬಲಹೀನತೆ ಇದೆಯೇ? ಒಳ್ಳೆಯದು.

ರಿವೈಸ್ ಕೋರ್ಸ್ 18-01-1993.

**ಪ್ರತ್ಯಕ್ಷತೆಯ ಆಧಾರ ದೃಢ ಪ್ರತಿಜ್ಞೆ**

ಹೃದಯದಿಂದ, ಪ್ರೀತಿಯಿಂದ ಪ್ರತಿಜ್ಞೆಯನ್ನಂತೂ ಮಾಡುತ್ತಿದ್ದೀರಿ ಆದರೆ 1.ಒಂದನೆಯದು ಪ್ರತಿಜ್ಞೆ 2.ಎರಡನೆಯದು ದೃಢ ಪ್ರತಿಜ್ಞೆ, ದೃಢ ಪ್ರತಿಜ್ಞೆಯ ಚಿಹ್ನೆ ಏನಾಗಿದೆ ಪ್ರಾಣ ಹೋಗಲಿ ಆದರೂ ಪ್ರತಿಜ್ಞೆಯನ್ನು ಬಿಡಬಾರದು. ಚಿಕ್ಕ ಚಿಕ್ಕ ಸಮಸ್ಯೆ ಅಥವಾ ಸಮಯಾನುಸಾರ ಬರುವ ಎಷ್ಟೇ ದೊಡ್ಡ ವಿಕರಾಳ ರೂಪದ ಪರಿಸ್ಥಿತಿ ಬರಲಿ ಆದರೆ ಪ್ರಾಣವನ್ನೇ ಒತ್ತೆ ಇಡುವ ಮಾತು ಬಂದ ಮೇಲೆ ಇವುಗಳೆಷ್ಟು? ಇವುಗಳೇನು ದೊಡ್ಡವಲ್ಲ. ಇದನ್ನೇ ದೃಢ ಪ್ರತಿಜ್ಞೆ ಎಂದು ಹೇಳಲಾಗುತ್ತದೆ. ಪ್ರತಿಜ್ಞೆ ಮಾಡುವುದು ಅರ್ಥಾತ್ ಪ್ರತ್ಯಕ್ಷದ ಸಾಕ್ಷಿಯನ್ನು ಕೊಡುವುದು. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. "ನನ್ನ ತಂದೆ" ಎಂಬ ಸ್ಮೃತಿಯಿಂದ ತಂದೆಯ ಸರ್ವ ಸಮರ್ಥತೆಗಳ (ಸರ್ವಶಕ್ತಿಗಳು) ಖಜಾನೆ ನನಗೆ ಜನ್ಮಸಿದ್ಧ ಅಧಿಕಾರವಾಗಿ ಲಭಿಸಿದೆ.

2. ನನಗೆ ತಂದೆಯ ಖಜಾನೆಯೇ ನನ್ನ ಖಜಾನೆ ಎಂಬ ನಿಶ್ಚಯ ಮತ್ತು ನಶೆ ಇದೆ.

3. ನಾನು ಬ್ರಹ್ಮಾ ತಂದೆಯ ಸಮಾನವಾಗಿ ಅವ್ಯಕ್ತ ಸ್ವರೂಪದಲ್ಲಿದ್ದು ಎಲ್ಲರನ್ನೂ ಮೊದಲು ಪ್ರತ್ಯಕ್ಷ ಮಾಡಲು ವಿಶೇಷವಾಗಿ ವಿಲ್ ಪವರನ್ನು ಕೊಟ್ಟು ವಿಶ್ವ ಸೇವೆಗಾಗಿ ಶಕ್ತಿಗಳನ್ನು ನಿಮಿತ್ತ ಮಾಡಿ ಆತ್ಮಿಕ ಶಕ್ತಿಗಳನ್ನು ಅರ್ಪಣೆ ಮಾಡಿದ್ದೇನೆ.

4. ನಾನು ತ್ರಿಮೂರ್ತಿ (ಶಿವ ಬಾಬಾ, ಬ್ರಹ್ಮ ಬಾಬಾ, ಜಗದಂಬ ಸರಸ್ವತಿ) ಅವರ ವರದಾನಗಳಿಂದ ಸೇವೆಯಲ್ಲಿ ಸಹಜ ಸಫಲತೆಯನ್ನು ಅನುಭವ ಮಾಡಿದ್ದೇನೆ.

5. ನಾನು ಪ್ರತ್ಯಕ್ಷತೆ ಮತ್ತು ಪ್ರತಿಜ್ಞೆ ಎರಡರಲ್ಲಿ ಸಮಾನತೆಯಿಂದ ಬಾಪ್‌ದಾದಾರವರಿಂದ ಆಶೀರ್ವಾದಗಳನ್ನು ಪಡೆದಿದ್ದೇನೆ.

6. ನಾನು ಚಿಕ್ಕ ಚಿಕ್ಕ ಸಮಸ್ಯೆಗಳನ್ನು ಅಥವಾ ವಿಕರಾಳ ರೂಪದ ಪರಿಸ್ಥಿತಿಗಳಲ್ಲಿ ಪ್ರಾಣ ಹೋದರು ಪ್ರತಿಜ್ಞೆಯನ್ನು ಬಿಡದೆ ದೃಢ ಪ್ರತಿಜ್ಞೆಯಿಂದ ಸ್ವಸ್ಥಿತಿಯನ್ನು ಅಚಲವಾಗಿ, ಸ್ಥಿರವಾಗಿ ಇಟ್ಟುಕೊಂಡು ವಿಜಯಿಯಾಗಿ ಪರಮಾತ್ಮನ ಕೊರಳ ಹಾರವಾಗುವ ವಿಜಯೀ ರತ್ನ.

7. ನಾನು ನೆಪಗಳನ್ನು ಹೇಳುವ ಬಲಹೀನತೆಯನ್ನು ಸಮಾಪ್ತಿ ಮಾಡಿ ಪರಿಸ್ಥಿತಿಗಳು ವಿಷಯಗಳು ಹೇಗಿದ್ದರೂ ನಾನು ತಂದೆಯಂತೆ ತಯಾರಾಗಲೇಬೇಕು ಎಂಬ ದೃಢ ಪ್ರತಿಜ್ಞೆಯನ್ನು ಮಾಡಿದ್ದೇನೆ.

8. ನಾನು ಇತರರಿಗೆ ಸಹಯೋಗವನ್ನು, ಸ್ನೇಹವನ್ನು, ಸಹಾನುಭೂತಿಯನ್ನು ಕೊಡುವ ಮಾಸ್ಟರ್ ದಾತನಾಗಿದ್ದೇನೆ.

9. ನಾನು ದೃಢ ಪ್ರತಿಜ್ಞೆಯಿಂದ ಮಾಸ್ಟರ್ ದಾತ ಸ್ಥಿತಿಯ ಸಮಾನವಾಗಿದ್ದು ಸ್ವಯಂ ಅನ್ನು ನೋಡಿಕೊಳ್ಳುತ್ತಿದ್ದೇನೆ, ಸ್ವಯಂಅನ್ನು ಪರಿವರ್ತನೆ ಮಾಡಿಕೊಳ್ಳುತ್ತಿದ್ದೇನೆ.

10. ನಾನು ದೃಢ ಪ್ರತಿಜ್ಞೆಯಿಂದ ಸೋಮಾರಿತನದ ಬಲಹೀನತೆಯನ್ನು ಸಮಾಪ್ತಿ ಮಾಡಿ ಈಗಲೇ ತಂದೆಯ ಸಮಾನವಾಗುವ ಬಾಪ್‌ಸಮಾನ ಸ್ವರೂಪ.

11. ನಾನು ಇತರರಲ್ಲಿ ಬಲಹೀನತೆಗಳನ್ನು ನೋಡುವ ದೂರ ದೃಷ್ಟಿಯನ್ನು ಸಮಾಪ್ತಿ ಮಾಡಿ ಸ್ವಯಂ ಅನ್ನು ನೋಡಿಕೊಳ್ಳುವ ಸಮೀಪ ದೃಷ್ಟಿಯನ್ನು ಹೆಚ್ಚಿಸಿಕೊಂಡಿದ್ದೇನೆ, ಮತ್ತು ಸ್ವಯಂ ಅನ್ನು ಪರಿವರ್ತನೆ ಮಾಡಿಕೊಂಡಿದ್ದೇನೆ.

12. ನಾನು ತಿಳಿದುಕೊಳ್ಳುವುದು, ಬಯಸುವುದು ಮತ್ತು ಮಾಡುವುದು ಮೂರನ್ನು ಸಮಾನವಾಗಿಟ್ಟುಕೊಳ್ಳುವ ಬಾಪ್‌ಸಮಾನ ಸ್ವರೂಪ.